## ಏನಿದು ?

ನಾಗರಿಕ ಪ್ರತಿರೋಧ ಎಂಬುದು ಸಾಮಾನ್ಯ ಜನರು ಹಿಂಸೆಯನ್ನು ಬಳಸದೇ ತಮ್ಮ ಹಕ್ಕುಗಳು ಮತ್ತು ನ್ಯಾಯಕ್ಕಾಗಿ ಹೋರಾಡುವ ವಿಧಾನವಾಗಿದೆ. ನಾಗರಿಕ ಪ್ರತಿರೋಧದಲ್ಲಿ ತೊಡಗಿಸಿಕೊಳ್ಳುವ ಜನರು ವಿವಿಧ ತಂತ್ರಗಳನ್ನು ಬಳಸುತ್ತಾರೆ. ಧರಣಿ, ಸಭಾತ್ಯಾಗ, ಸಾಮೂಹಿಕ ಪ್ರತಿಭಟನೆಗಳು ಮತ್ತು ಇತರ ಕ್ರಮಗಳನ್ನು ಅನುಸರಿಸಿ, ವಿಶಾಲ ಪ್ರಮಾಣದ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಬದಲಾವಣೆಗೆ ಕಾರಣವಾಗುತ್ತಾರೆ. ವಿಶ್ವಾದ್ಯಂತ ನಾಗರಿಕ ಪ್ರತಿರೊಧವನ್ನು ವಿವಿಧ ಹೆಸರಿನಲ್ಲಿ ಉಲ್ಲೇಖಿಸಲಾಗುತ್ತದೆ. ಹಿಂಸೆ ರಹಿತ ಹೋರಾಟ, ನೇರ ಕ್ರಮ, ಜನರ ಅಧಿಕಾರ, ರಾಜಕೀಯ ಪ್ರತಿರೋಧ ಮತ್ತು ನಾಗರಿಕ ಚಳವಳಿ ಎಂಬ ಹೆಸರಿನಿಂದ ಕರೆಯಲಾಗುತ್ತದೆ. ಆದರೆ ಯಾವ ಶಬ್ದವನ್ನು ಬಳಸಿದರೂ, ನಾಗರಿಕ ಪ್ರತಿರೋಧದ ಮೂಲ ಅಂಶವು ಒಂದೇ ತೆರನಾಗಿರುತ್ತದೆ.

ನಾಗರಿಕ ಪ್ರತಿರೋಧ ಚಳವಳಿಯು ಅತ್ಯಂತ ಶಕ್ತಿಯುತವಾಗಿದೆ. ಯಾಕೆಂದರೆ ಅವು ಹತ್ತಿಕ್ಕುವುದರ ವಿರುದ್ಧ ಸಾಮೂಹಿಕ ಹೋರಾಟವಾಗಿರುತ್ತದೆ ಮತ್ತು ಇದು ಮುಕ್ತ ಹಾಗೂ ಪಾರದರ್ಶಕ ಸಮಾಜದ ಗುರಿ ಇರುತ್ತದೆ ಮತ್ತು ಹಳೆಯ ವ್ಯವಸ್ಥೆಯನ್ನು ಜಾರಿಗೆ ತರಲು ಜನರ ಸಂಭಾವ್ಯ ಬದ್ಧತೆಯೂ ಇದರಲ್ಲಿ ಒಳಗೊಂಡಿರುತ್ತದೆ. ಅನ್ಯಾಯವೆಸಗುವ ಆಡಳಿತಗಾರರಿಗೆ ತಮ್ಮ ಸಹಕಾರವನ್ನು ಸ್ಥಗಿತಗೊಳಿಸಲು ಜನರು ಆಯ್ಕೆ ಮಾಡಿಕೊಂಡಾಗ, ಅದನ್ನು ನಿರ್ವಹಿಸಲು ವ್ಯವಸ್ಥೆ ಅತ್ಯಂತ ಶ್ರಮವಹಿಸಬೇಕಾಗುತ್ತದೆ. ಸಾಕಷ್ಟು ಪ್ರಮಾಣದ ಜನರು ಅಸಹಕಾರ ವಿಧಾನವನ್ನು ಆಯ್ಕೆ ಮಾಡಿಕೊಂಡಾಗ, ವ್ಯವಸ್ಥೆಯ ಅಸ್ಥಿರವಾಗುತ್ತದೆ ಮತ್ತು ಇದು ಬದಲಾಗಬೇಕು ಅಥವಾ ಕುಸಿಯಬೇಕು ಎಂಬ ಸನ್ನಿವೇಶ ನಿರ್ಮಾಣವಾಗುತ್ತದೆ. ನಾಗರಿಕ ಪ್ರತಿರೋಧಕ್ಕೆ ವಿರೋಧ ಹೊಂದಿರುವವರು ಶಸ್ತ್ರಸಜ್ಜಿತ ಅಥವಾ ಆರ್ಥಿಕ ಶಕ್ತರಾಗಿದ್ದರೂ, ವಿಶಾಲ ವ್ಯಾಪ್ತಿಯಲ್ಲಿ ಅಹಿಂಸೆ ರೂಪದ ಸಾಮೂಹಿಕ ಅಸಹಕಾರ ಮತ್ತು ಸಾರ್ವಜನಿಕ ವ್ಯತ್ಯಯವನ್ನು ತಡೆಯಲು ಸಾಧ್ಯವಾಗುವುದಿಲ್ಲ.

ಈ ಕಾರಣಕ್ಕೆ ವಿಕ್ಷಿಪ್ತ ಸನ್ನಿವೇಶದಲ್ಲಿ ಹಲವು ನಾಗರಿಕ ಪ್ರತಿರೋಧ ಚಳವಳಿಗಳು ಮತ್ತು ಕ್ಯಾಂಪೇನ್‌ಗಳು ಯಶಸ್ವಿಯಾಗಿವೆ. ಕಳೆದ ಶತಮಾನದ ಪ್ರತಿ ದಶಕದಲ್ಲೂ ಆರು ಖಂಡಗಳಲ್ಲಿ, ಅಹಿಂಸಾತ್ಮಕ ವಿಧಾನವನ್ನು ಬಳಸಿ ಜನಪ್ರಿಯ ಚಳವಳಿಗಳು ನಡೆದಿದ್ದು, ಇವು ದಮನಕಾರಿ ಆಡಳಿತವನ್ನು ಪಲ್ಲಟಗೊಳಿಸಿವೆ ಹಾಗೂ ಸೇನಾ ಆಕ್ರಮಣದ ವಿರುದ್ಧ ಯಶಸ್ವಿಯಾಗಿ ಹೋರಾಟ ನಡೆಸಿವೆ ಮತ್ತು ತಮ್ಮ ಸಮಾಜಕ್ಕೆ ನ್ಯಾಯ ಮತ್ತು ಸ್ವಾತಂತ್ರ್ಯವನ್ನು ಒದಗಿಸಿವೆ. ಉದಾಹರಣೆಗೆ, ದಕ್ಷಿಣ ಆಫ್ರಿಕಾದಲ್ಲಿ ವರ್ಣಭೇದ ನೀತಿಯನ್ನು ಕೊನೆಗಾಣಿಸುವಲ್ಲಿ ನಾಗರಿಕ ಪ್ರತಿರೋಧವು ಪ್ರಮುಖವಾಗಿತ್ತು. ಅಮೆರಿಕದಲ್ಲಿ ಮಹಿಳೆಯರ ಹಕ್ಕುಗಳು, ನಾಗರಿಕ ಹಕ್ಕುಗಳು ಮತ್ತು ಕಾರ್ಮಿಕ ಹಕ್ಕುಗಳನ್ನು ಎತ್ತಿ ಹಿಡಿಯಲು ಇದನ್ನು ಬಳಸಲಾಗಿದೆ; ಫಿಲಿಫೀನ್ಸ್, ಚಿಲಿ, ಇಂಡೋನೇಷ್ಯಾ, ಸರ್ಬಿಯಾ ಮತ್ತು ಇತರ ಸ್ಥಳಗಳಲ್ಲಿ ಸರ್ವಾಧಿಕಾರಿಗಳನ್ನು ಪಲ್ಲಟಗೊಳಿಸಿವೆ; ಡೆನ್ಮಾರ್ಕ್ ಮತ್ತು ಪೂರ್ವ ಟಿಮೋರ್‌ನಲ್ಲಿ ವಿದೇಶಿ ವಸಾಹತುಗಳನ್ನು ಕಿತ್ತೊಗೆಯಲು ಬಳಕೆಯಾಗಿವೆ; ಬ್ರಿಟನ್‌ನಿಂದ ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಲು ಇವು ಪ್ರಮುಖವಾಗಿವೆ; ಪೂರ್ವ ಯುರೋಪ್‌ನಲ್ಲಿ ವಂಚನೆಯ ಚುನಾವಣೆಗಳನ್ನು ಹತ್ತಿಕ್ಕಿವೆ ಮತ್ತು ಲೆಬನಾನ್‌ನಲ್ಲಿ ಸಿರಿಯಾ ನುಸುಳುವಿಕೆಯನ್ನು ತಡೆದಿವೆ ಮತ್ತು ಹಲವು ಇತರ ಭಾಗಗಳಲ್ಲಿ ಮಾನವ ಹಕ್ಕು, ನ್ಯಾಯ ಮತ್ತು ಪ್ರಜಾಪ್ರಭುತ್ವ ಸ್ವಯಂ ಆಡಳಿತವನ್ನು ಸ್ಥಾಪಿಸಲು ಬಳಸಲ್ಪಟ್ಟಿದೆ.

# ಪ್ರಮುಖ ಕಲ್ಪನೆಗಳು

### ನಾಗರಿಕ ಪ್ರತಿರೋಧ ಹಾಗೂ ನೈತಿಕ ಅಹಿಂಸೆ ಹೋರಾಟ

ನಾಗರಿಕ ಪ್ರತಿರೋಧ ಎಂಬುದು ರಾಜಕೀಯ ವಿರೋಧದ ಒಂದು ರೂಪವಾಗಿದೆ. ನೈತಿಕ ಅಹಿಂಸೆಯು ಹಿಂಸೆಯನ್ನು ಬಳಸುವುದಕ್ಕೆ ವಿರೋಧ ವ್ಯಕ್ತಿಪಡಿಸುವ ರೀತಿಯಾಗಿದೆ. ಕೆಲವು ಯಶಸ್ವಿ ನಾಗರಿಕ ಪ್ರತಿರೋಧ ಚಳವಳಿಗಳಾದ ಭಾರತೀಯ ಸ್ವಾತಂತ್ರ್ಯ ಹೋರಾಟ ಮತ್ತು ಅಮೆರಿಕದ ನಾಗರಿಕ ಹಕ್ಕು ಚಳವಳಿಯು ನೈತಿಕ ಅಹಿಂಸೆಯನ್ನು ಬೋಧಿಸಿವೆ. ಆದರೆ, ನಾಗರಿಕ ಪ್ರತಿರೋಧ ವ್ಯಕ್ತಪಡಿಸುವ ಜನರು ಅಹಿಂಸೆಯ ಕ್ರಮಕ್ಕೆ ಬದ್ಧವಾಗುವ ಯಾವುದೇ ಸಿದ್ಧ ವಿಧಾನಗಳಿಲ್ಲ. ಅಷ್ಟಕ್ಕೂ, ಇತಿಹಾಸದಾದ್ಯಂತ ತಿಳಿದು ಬರುವುದೇನೆಂದರೆ, ನಾಗರಿಕ ಪ್ರತಿರೋಧ ತೋರುವವರು ನೈತಿಕ ಅಹಿಂಸೆಗೆ ಯಾವುದೇ ಪ್ರಚೋದನೆ ಹೊಂದಿರುವುದಿಲ್ಲ. ಬದಲಿಗೆ, ತಮ್ಮ ಹೋರಾಟಕ್ಕೆ ನಾಗರಿಕ ಪ್ರತಿರೋಧ ಮಾತ್ರವೇ ಹೆಚ್ಚು ಪರಿಣಾಮಕಾರಿಯಾದ ವಿಧಾನ ಎಂಬ ವಾಸ್ತವದಿಂದ ಪ್ರೇರಿತರಾಗಿರುತ್ತಾರೆ.

### ಅಧಿಕಾರದ ಬಗ್ಗೆ ಮಾನೋಲಿಥಿಕ್ ಹಾಗೂ ಪ್ಲೂರಲಿಸ್ಟಿಕ್ ದೃಷ್ಟಿಕೋನ

ಬಹುತೇಕ ಸಮಾಜಗಳಲ್ಲಿ, ಅಧಿಕಾರದ ದೃಷ್ಟಿಕೋನವು ಮಾನೋಲಿಥಿಕ್ ಆಗಿರುತ್ತದೆ (ಚಿತ್ರ 1). ಅಂದರೆ ಸಾಮಾನ್ಯ ಜನರು ಉತ್ತಮ ನಡವಳಿಕೆ, ನಿರ್ಧಾರಗಳು ಮತ್ತು ತಮ್ಮ ಸರ್ಕಾರ ಮತ್ತು ಸಂಸ್ಥೆಗಳ ಬೆಂಬಲವನ್ನು ಆಧರಿಸಿರುತ್ತಾರೆ. ಅಧಿಕಾರ ಚಲಾವಣೆಯ ಹಂತದಲ್ಲಿರುವ ಕೆಲವರಲ್ಲೇ ಅಧಿಕಾರ ಮೀಸಲಾಗಿರುತ್ತದೆ ಮತ್ತು ಇವರು ಶ್ರೀಮಂತಿಕೆ ಮತ್ತು ಸಾಮರ್ಥ್ಯವನ್ನು ಹಿಂಸೆಗೆ ಬಳಸಿಕೊಳ್ಳುತ್ತಾರೆ. ಅಧಿಕಾರದ ಮಾನೋಲಿತ್ ಎಂಬುದು ಶಾಶ್ವತ, ದೀರ್ಘಕಾಲೀನ ಮತ್ತು ಸುಲಭಕ್ಕೆ ಬದಲಾಗುವಂಥದ್ದಾಗಿರುವುದಿಲ್ಲ. ಆದಾಗ್ಯೂ, ನಾಗರಿಕ ಪ್ರತಿರೋಧವು ವಿವಿಧ ಸ್ಥಳವನ್ನು ಆಧರಿಸಿರುತ್ತದೆ ಹಾಗೂ ಇದು ಅಧಿಕಾರದ

ಬಹು ದೃಷ್ಟಿಕೋನದಿಂದ ವಿವರಿಸಲ್ಪಟ್ಟಿರುತ್ತದೆ (ಚಿತ್ರ 2). ಸರ್ಕಾರ ಮತ್ತು ಇತರ ಅಧಿಕಾರ ಅವಲಂಬಿತ ವ್ಯವಸ್ಥೆಗಳು ಜನರ ಬದ್ಧತೆ ಅಥವಾ ಮೌನ ಸಮ್ಮತಿಯನ್ನು ಅವಲಂಬಿಸಿರುತ್ತದೆ. ಬಹುತ್ವ ದೃಷ್ಟಿಕೋನದಲ್ಲಿ, ಸಮಾಜದ ಹಲವು ಭಾಗಗಳ ಭಾಗವಹಿಸುವಿಕೆ ಮತ್ತು ಮೌಲೀಕರಣದಲ್ಲಿ ಅಧಿಕಾರ ಇರುತ್ತದೆ. ಇದು ಚಲನಶೀಲವಾಗಿದೆ ಮತ್ತು ಹಲವು ಸಂಸ್ಥೆಗಳು ಮತ್ತು ಜನರ ಸಹಕಾರವನ್ನೇ ಮೂಲವಾಗಿರಿಸಿಕೊಳ್ಳುವುದು ಇದರ ಶಕ್ತಿಯಾಗಿರುತ್ತದೆ. ದೇಶದ ಕ್ರಮವನ್ನು ತೊಡೆದು ಹಾಕಲು ವಿಶಾಲವಾದ ಸಹಕಾರದ ಆಧಾರದಲ್ಲಿ ನಾಗರಿಕ ಪ್ರತಿರೋಧ ಚಳವಳಿಗಳ ವ್ಯೂಹಗಳು ರಚನೆಯಾಗುತ್ತವೆ ಮತ್ತು ಅವುಗಳನ್ನು ಅಭಿವೃದ್ಧಿಪಡಿಸಲಾಗುತ್ತದೆ.

### ಕರ್ತವ್ಯ ಲೋಪ ಮತ್ತು ಬದ್ಧತೆ

ಇತಿಹಾಸದಾದ್ಯಂತ ನಾಗರಿಕ ಪ್ರತಿರೋಧ ವ್ಯಕ್ತಪಡಿಸುವವರು ನೂರಾರು ವಿಧಗಳನ್ನು ಬಳಸಿದ್ದಾರೆ. ಇವುಗಳನ್ನು ಎರಡು ವಿಭಿನ್ನ ವರ್ಗಗಳನ್ನಾಗಿ ವಿಭಜಿಸಬಹುದಾಗಿದೆ. ಕರ್ತವ್ಯ ಲೋಪ ಎಂದರೆ ಸಾಮಾನ್ಯವಾಗಿ ಮಾಡುತ್ತಿರುವುದು ಅಥವಾ ಮಾಡಬೇಕಿರುವುದನ್ನು ಜನರು ನಿಲ್ಲಿಸುವುದಾಗಿದೆ. ಉದಾಹರಣೆಗೆ ಕೆಲಸಗಾರರು ಧರಣಿ, ತೆರಿಗೆ ಪಾವತಿಗೆ ನಿರಾಕರಿಸುವುದು ಮತ್ತು ಖರೀದಿ ಮಾಡಲು ನಿರಾಕರಿಸುವುದಾಗಿದೆ. ಬದ್ಧತೆ ಎಂದರೆ ಸಾಮಾನ್ಯವಾಗಿ ಮಾಡದ ಅಥವಾ ಮಾಡಲು ನಿರ್ಬಂಧವಿರುವುದನ್ನು ಜನರು ಮಾಡುವ ತಂತ್ರವಾಗಿದೆ. ಉದಾಹರಣೆಗೆ, ಪ್ರತಿಭಟನೆ, ಸಾಮೂಹಿಕ ಪ್ರತಿಭಟನೆ, ಧರಣಿ ಮತ್ತು ಇತರ ನಾಗರಿಕ ಅಶಿಸ್ತು. ಇಂತಹ ತಂತ್ರಗಳ ವ್ಯೂಹಾತ್ಮಕ ಅನುಕ್ರಮದಿಂದ ಪ್ರತಿರೋಧಿಗಳು ತಮ್ಮ ನಿಲುವಿನಲ್ಲಿ ನಿರ್ಲಿಪ್ತರಾಗಿರಲು ಪ್ರೋತ್ಸಾಹಿಸುತ್ತದೆ. ತಂತ್ರದ ವ್ಯಾಪ್ತಿ ಹೆಚ್ಚು ಇದ್ದಾಗ ಜನಸಾಮಾನ್ಯರೂ ಕೂಡ ಪ್ರತಿರೋಧಕ್ಕೆ ಸೇರಿಕೊಳ್ಳಬಹುದು. ಅಧಿಕ ಅಪಾಯ ಮತ್ತು ಕಡಿಮೆ ಅಪಾಯ, ಸಾರ್ವಜನಿಕ ಮತ್ತು ಖಾಸಗಿ, ಕೇಂದ್ರೀಕೃತ ಅಥವಾ ವಿಕೇಂದ್ರೀಕೃತವಾಗಿದ್ದರೆ ಸಮಾಜದ ವಿವಿಧ ಭಾಗಗಳು ಜನರು ಇದರಲ್ಲಿ ತೊಡಗಿಸಿಕೊಳ್ಳಬಹುದಾಗಿರುತ್ತದೆ.

### ಒಗ್ಗಟ್ಟು, ಯೋಜನೆ ಮತ್ತು ಅಹಿಂಸೆಯ ಶಿಸ್ತು

ಯಶಸ್ವಿ ನಾಗರಿಕ ಪ್ರತಿರೋಧಕ್ಕೆ ಪ್ರಮುಖ ಮೂರು ಸಿದ್ಧಾಂತವೆಂದರೆ ಒಗ್ಗಟ್ಟು, ಯೋಜನೆ ಮತ್ತು ಅಹಿಂಸೆಯ ಶಿಸ್ತು ಆಗಿದೆ. ಸಮಾಜದ ವಿವಿಧ ವಿಭಾಗವನ್ನು ಒಟ್ಟಾಗಿಸುವ ಮೂಲಕ ಒಗ್ಗಟ್ಟು ಸಾಧಿಸಬಹುದು. ಇವರು ಪ್ರಾಥಮಿಕವಾಗಿ ಸಾಧಿಸಬಹುದಾದ ಗುರಿಯ ಸಮೀಪದಲ್ಲಿ ವಿಭಿನ್ನ ದೂರುಗಳನ್ನು ಹೊಂದಿರಬಹುದಾಗಿದೆ. ಯೋಜನೆಯು ಕ್ಯಾಂಪೇನ್‌ಗಳು ಮತ್ತು ತಂತ್ರಗಳ ಅನುಕ್ರಮಣಿಕೆಯಾಗಿದ್ದು, ಇವು ಸ್ಥಿತಿಗಳ ಎಚ್ಚರಿಕೆಯ ವಿಶ್ಲೇಷಣೆ ಮತ್ತು ಕ್ರಮದ ಅವಕಾಶಗಳನ್ನು ಅವಲಂಬಿಸಿರುತ್ತವೆ. ಸಂಭಾವ್ಯ ಹಿನ್ನಡೆಯನ್ನು ಊಹಿಸುವುದು ಮತ್ತು ಅವುಗಳನ್ನು ಎದುರಿಸಲು ಸೂಕ್ತ ತಯಾರಿ ಮಾಡುವುದನ್ನೂ ಇದು ಒಳಗೊಂಡಿರುತ್ತದೆ. ಅಹಿಂಸೆಯ ಶಿಸ್ತು, ಕೇವಲ ಅಹಿಂಸೆಯ ತಂತ್ರಗಳನ್ನು ಮಾತ್ರ ಬಳಸುವ ತಂತ್ರಗಳಿಗೆ ಬದ್ಧತೆಯನ್ನು ಒಳಗೊಂಡಿರುತ್ತದೆ. ಯಾಕೆಂದರೆ ಹಿಂಸೆಯು ಸಾರ್ವಜನಿಕರ ಭಾಗವಹಿಸುವಿಕೆಯನ್ನು ಕಡಿಮೆ ಮಾಡುತ್ತದೆ, ಚಳವಳಿಗೆ ಹಾನಿ ಉಂಟು ಮಾಡುತ್ತದೆ ಮತ್ತು ಅಂತಾರಾಷ್ಟ್ರೀಯ ಬೆಂಬಲವನ್ನು ಕಡಿಮೆ ಮಾಡುತ್ತದೆ ಮತ್ತು ಬದ್ಧತೆ ಬದಲಾಗುವ ಆತಂಕವನ್ನು ಹೊಂದಿರುತ್ತದೆ.

## <u>ಹತ್ತು ಪ್ರಶ್ನೆಗಳು</u>

### 1. ನಾಗರಿಕ ಪ್ರತಿರೋಧವನ್ನು ಬಳಸಿ ಸಾಮಾನ್ಯ ಜನರು ಹೇಗೆ ಆಡಳಿತಗಾರರನ್ನು ಸೋಲಿಸಿದ್ದಾರೆ?

ಆಡಳಿತಗಾರರು ಆನುವಂಶಿಕವಾಗಿ ಪ್ರಬಲರಾಗಿರುವುದಿಲ್ಲ. ಆಡಳಿತಗಾರರು ತಮ್ಮ ಸಮಾಜದಲ್ಲಿ ಸಾವಿರಾರು ಅಥವಾ ಕೋಟ್ಯಂತರ ಜನರ ನೇರ ಅಥವಾ ಪರೋಕ್ಷ ಬೆಂಬಲವನ್ನು ಹೊಂದಿದ್ದಾಗ ಪ್ರಬಲರಾಗಿರುತ್ತಾರೆ. ಆಡಳಿತಗಾರರು ನಿಯಂತ್ರಣವನ್ನು ಹೊಂದಿರಲು ಪೊಲೀಸ್, ಸೇನೆ, ನ್ಯಾಯಾಂಗ ಮತ್ತು ಅಧಿಕಾರಿ ವರ್ಗವು ತಮ್ಮ ಕೆಲಸವನ್ನು ಮಾಡಬೇಕಿರುತ್ತದೆ. ಸಮಾಜದಲ್ಲಿನ ಜನರು ಕೆಲಸಕ್ಕೆ ನಿಯಮಿತವಾಗಿ ಹೋಗಬೇಕು, ತೆರಿಗೆ ಮತ್ತು ಬಾಡಿಗೆ ಪಾವತಿ ಮಾಡಬೇಕು ಮತ್ತು ಮಾರುಕಟ್ಟೆಯಲ್ಲಿ ಸಾಮಗ್ರಿಗಳನ್ನು ಖರೀದಿ ಮಾಡಬೇಕು. ಇವು ದೇಶ ಹೊಂದಿರುವ ವಹಿವಾಟಿಗೆ ಬೆಂಬಲ ನೀಡುತ್ತವೆ. ಬಂದರು ಮತ್ತು ಸಾರಿಗೆಯಲ್ಲಿ ಕೆಲಸ ಮಾಡುವವರು ಹಾಗೂ ಸಂವಹನ ಮತ್ತು ಮೂಲಸೌಕರ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರು ಸಾಮಗ್ರಿಗಳನ್ನು ಸಾಗಿಸುವುದು ಹಾಗೂ ಸೇವೆಗಳನ್ನು ಪೂರೈಸುವುದನ್ನು ಮುಂದುವರಿಸಬೇಕು. ವ್ಯವಸ್ಥೆ ಕಾರ್ಯನಿರ್ವಹಿಸಲು ಪ್ರಮುಖವಾದ ಕೆಲವು ಸಮೂಹಗಳ ಉದಾಹರಣೆ ಮಾತ್ರ ಇವು.

ಇದನ್ನು ಅರ್ಥ ಮಾಡಿಕೊಂಡು ನಾಗರಿಕ ಪ್ರತಿರೋಧ ಆಯೋಜಕರು ಈ ಬೆಂಬಲವನ್ನು ಅಲುಗಾಡಿಸಲು ತಂತ್ರಗಳನ್ನು ರೂಪಿಸಬೇಕು ಮತ್ತು ಪ್ರಸ್ತುತ ವ್ಯವಸ್ಥೆ ಮುಂದುವರಿಯುವುದು ಕಷ್ಟ ಎಂಬಂತಾಗಿಸಬೇಕು. ಪ್ರತಿರೋಧಕ್ಕೆ ಭಾರಿ ಸಂಖ್ಯೆಯ ಜನರನ್ನು ಕರೆತರುವುದು ಮತ್ತು ಪ್ರತಿಭಟನೆಯಿಂದಾಗಿ ಆಡಳಿತಗಾರರ ಪ್ರಭಾವ ಕಡಿಮೆಯಾಗುತ್ತದೆ. ಅದರಲ್ಲೂ ವಿಶೇಷವಾಗಿ ಜನರು ತಮ್ಮ ಹಕ್ಕುಗಳನ್ನು ಚಲಾವಣೆಗೊಳಿಸುವುದಕ್ಕೆ ವಿರೋಧ ಉಂಟಾದ ಸಂದರ್ಭದಲ್ಲಿ ಇದು ಹೆಚ್ಚು ಪ್ರಭಾವಕಾರಿಯಾಗಿರುತ್ತದೆ. ದೇಶದ ನಿಯಂತ್ರಣವನ್ನು ಅಲುಗಾಡಿಸುವುದರಿಂದ, ವ್ಯವಸ್ಥೆಯ ನಿರ್ವಹಣೆಯನ್ನೇ ಕಷ್ಟವಾಗಿಸುವ ಮಟ್ಟಕ್ಕೆ ಪ್ರತಿರೋಧ ಚಳವಳಿ ಸಾಗಬಹುದು. ಸಮರ್ಥಕರು ಭವಿಷ್ಯವನ್ನು ಪ್ರಶ್ನಿಸುವ ಮಟ್ಟಕ್ಕೆ ಇದು ಕೊಂಡೊಯ್ಯಬಹುದು. ಒಮ್ಮೆ ಅವರ ವಿಶ್ವಾಸವು ಕಡಿಮೆಯಾದಾಗ, ಯಾವ ರೀತಿ ಯ ಹತ್ತಿಕ್ಕುವಿಕೆಯನ್ನು ಜಾರಿಗೊಳಿಸುವುದೂ ಕಷ್ಟಕರವಾಗುತ್ತದೆ.

## 2. ನಾಗರಿ ಪ್ರತಿರೋಧ ಆರಂಭ ಹೇಗಾಗುತ್ತದೆ?

ಹಲವು ಯಶಸ್ವಿ ನಾಗರಿ ಪ್ರತಿರೋಧ ಕ್ಯಾಂಪೇನ್‌ಗಳು ಜನಸಾಮಾನ್ಯರು ಕ್ರಮ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೆಚ್ಚಿಸುವ ಮೂಲಕ ಆರಂಭವಾಗುತ್ತದೆ. ಜನರನ್ನು ಒಟ್ಟಾಗಿಸಲು ಸ್ಥಳೀಯ ಹಾಗೂ ಕಡಿಮೆ ಅಪಾಯದ ತಂತ್ರಗಳನ್ನು ಬಳಸಲಾಗುತ್ತದೆ ಮತ್ತು ಒಗ್ಗಟ್ಟು ಸಾಧಿಸುವುದು ಅತ್ಯಂತ ಪ್ರಮುಖವಾಗಿರುತ್ತದೆ. ಉದಾಹರಣೆಗೆ, ಭಾರತದಲ್ಲಿ ಮೊದಲ ನಾಗರಿಕ ಪ್ರತಿರೋಧ ಕ್ಯಾಂಪೇನ್‌ಅನ್ನು ಗಾಂಧಿ ಆರಂಭಿಸುವುದಕ್ಕೂ ಮೊದಲು, ಜನಸಾಮಾನ್ಯರನ್ನು ಭೇಟಿ ಮಾಡುವುದು ಮತ್ತು ಮಾತನಾಡುವುದಕ್ಕೆ ಹಾಗೂ ಅವರ ದೂರುಗಳು, ಆಸೆಗಳು ಮತ್ತು ಭಯಗಳ ಬಗ್ಗೆ ಅರಿಯುವಲ್ಲಿ ತಿಂಗಳುಗಳು ಹಾಗೂ ವರ್ಷಗಳನ್ನು ಕಳೆದಿದ್ದರು. ಅವರ ಸಹಕಾರ ಮತ್ತು ಬದ್ಧತೆಗೆ ಏನು ಅಗತ್ಯವಿದೆ ಎಂಬುದನ್ನು ಅವರು ಅರಿತರು. ಅವರು "ಸಂರಚಿತ ಕೆಲಸ" ದಲ್ಲಿ ತೊಡಗಿಸಿಕೊಳ್ಳುವಂತೆ ಜನರಿಗೆ ಸೂಚಿಸಿದರು. ಅಂದರೆ ದೇಶದ ಮೇಲೆ ವಿಶ್ವಾಸವನ್ನು ಕಳೆದು ಕೊಂಡ ಜನರು ತಮ್ಮಲ್ಲೇ ಸ್ವಾವಲಂಬನೆಯನ್ನು ಬೆಳೆಸಿಕೊಳ್ಳುವ ಸಮುದಾಯ ಸೇವೆ ಇದಾಗಿದೆ.







ನಾಗರಿಕ ಪ್ರತಿರೋಧದ ಹೆಚ್ಚು ನೇರ ರೂಪದಲ್ಲಿ ತೊಡಗಿಸಿಕೊಳ್ಳಲು ಕ್ಯಾಂಪೇನ್ ಶಕ್ತವಾದಾಗ, ದೊಡ್ಡ ಮಟ್ಟದಲ್ಲಿ ಸಾರ್ವಜನಿಕರಿಗೆ ಸಂಬಂಧಿಸಿದ ಸ್ಥಳೀಯ ಸಮಸ್ಯೆಗಳಿಗೆ ಪ್ರತಿಕ್ರಿಯೆಗಳ ಮೇಲೆ ಕ್ರಮ ಕೈಗೊಳ್ಳಲು ಆರಂಭಿಸಿದರು. ಉದಾಹರಣೆಗೆ, ಸಮಾನತೆಯ ಹೋರಾಟಗಾರರು ಪೋಲೆಂಡ್‌ನಲ್ಲಿ ಒಂದು ಬಂದರಿನಲ್ಲಿ ಕೂಲಿಗಳ ಪ್ರತಿಭಟನೆಯಿಂದ ಆರಂಭಿಸಿದರು. ಒಂದು ವಿಷಯದಲ್ಲಿ ಅವರಿಗೆ ಯಶಸ್ಸು ಸಿಕ್ಕಾಗ ಅವರು ಸ್ವತಂತ್ರ ವ್ಯಾಪಾರಿ ಸಂಘಟನೆಯನ್ನು ರಚಿಸಿದರು. ಈ ವಿಜಯವು ಅವರಿಗೆ ಮಾನಸಿಕ ಪ್ರಭಾವವನ್ನು ಉಂಟು ಮಾಡಿದ್ದು, ಚಳವಳಿಗೆ ಬೆಂಬಲವೂ ಸಿಕ್ಕಿತು. ಇದೇ ರೀತಿ, ಯುಎಸ್ ನಾಗರಿಕ ಹಕ್ಕುಗಳ ಚಳವಳಿಯು ಯಶಸ್ವಿ ಪ್ರತಿಭಟನೆ ಮತ್ತು ಧರಣಿಯ ನಂತರದಲ್ಲಿ ಪ್ರಗತಿ ಕಂಡಿತು ಮತ್ತು ದಕ್ಷಿಣ ಅಮೆರಿಕದ ಕೆಲವು ನಗರಗಳಲ್ಲಿ ಬಸ್ ಮತ್ತು ಸ್ಟೋರ್‌ಗಳಲ್ಲಿ ಜನಾಂಗೀಯ ಭೇದವನ್ನು ಕಡಿಮೆ ಮಾಡಿತು. ಈ ಯಶಸ್ಸುಗಳಿಂದಾಗಿ, ನಾಗರಿಕ ಪ್ರತಿರೋಧದ ಶಕ್ತಿಯನ್ನು ಚಳವಳಿಯು ತೋರಿಸಿತು ಮತ್ತು ಇದು ಅಷ್ಟೇ ಬೇಗ ರಾಷ್ಟ್ರೀಯ ಗಮನ ಸೆಳೆಯಿತು.

## 3. ನಾನು ಪ್ರತಿಭಟನೆಯನ್ನು ಆಯೋಜಿಸುವುದು ಹೇಗೆ?

ಚಳವಳಿಯ ಕಾರ್ಯತಂತ್ರ ರೂಪಿಸುವವರು ಮೊದಲು ತಮ್ಮ ಗುರಿಗಳು ಏನು, ಸಾಮರ್ಥ್ಯವೇನು, ಬಲಹೀನತೆಗಳೇನು ಮತ್ತು ತಮ್ಮ ಚಳವಳಿಯ ಸಾಧ್ಯತೆಗಳು ಮತ್ತು ಅವರ ವಿರೋಧಿಗಳ ಸಾಧ್ಯತೆಗಳೇನು ಎಂದು ಗುರುತಿಸಬೇಕು ಮತ್ತು ತೃತೀಯ ಪಕ್ಷಗಳು ಹಾಗೂ ಬಾಹ್ಯ ಕ್ರಮಗಳ ಸಹಕಾರವೇನು ಎಂದು ವಿಶ್ಲೇಷಿಸಬೇಕು. ಚಳವಳಿಯು ಅಲ್ಪಾವಧಿ, ಮಧ್ಯಾವಧಿ ಮತ್ತು ದೀರ್ಘಾವಧಿ ಗುರಿಗಳನ್ನು ನಿಗದಿಸಿದಾಗ ಮತ್ತು ಸನ್ನಿವೇಶದ ವಾಸ್ತವ ವಿಶ್ಲೇಷಣೆ ಮತ್ತು ಸೂಕ್ಷ್ಮ ಅಂಶಗಳನ್ನು ನಿಖರಗೊಳಿಸಿದಾಗ, ಯಾವ ತಂತ್ರವನ್ನು ಅಳವಡಿಸಿಕೊಳ್ಳಬೇಕು ಎಂಬುದನ್ನು ನಿರ್ಧರಿಸುವುದು ಸುಲಭವಾಗುತ್ತದೆ. ಈ ವೇಳೆ, ಮುಖ್ಯ ತಂತ್ರವಾಗಿ ಪ್ರತಿಭಟನೆಯ ಮೂಲಕ

ಚಳವಳಿಯನ್ನು ಮಾಡುವುದಾದರೆ ಮತ್ತು ಅವುಗಳನ್ನು ಯಶಸ್ಸುಗೊಳಿಸುವದು ಹೇಗೆ ಎಂದು ಕಲಿಯುವುದಾದರೆ, ಇದನ್ನು ಮಾಡುವುದಕ್ಕೆ ತಾಂತ್ರಿಕ ಮತ್ತು ವ್ಯೂಹಾತ್ಮಕ ಆಯಾಮಗಳನ್ನು ವಿವರಿಸುವ ಹಲವು ಸಂಪನ್ಮೂಲಗಳು ಲಭ್ಯವಿರುತ್ತವೆ.

## 4. ಪ್ರತಿಭಟನೆಯಲ್ಲದಿದ್ದರೆ, ಮತ್ತೇನನ್ನು ಮಾಡಬಹುದು?

ನಾಗರಿಕ ಪ್ರತಿರೋಧ ಚಳವಳಿಗೆ ಪ್ರಾಥಮಿಕ ಚಟುವಟಿಕೆಯೇ ಪ್ರತಿಭಟನೆ ಎಂದು ಹಲವು ಜನರು ಭಾವಿಸುತ್ತಾರೆ. ಆದರೆ, ಪ್ರತಿಭಟನೆಯು ಹಲವು ವಿಧದ ತಂತ್ರಗಳಲ್ಲಿ ಒಂದಾಗಿದ್ದು, ಇವುಗಳನ್ನು ನಾಗರಿಕ ಪ್ರತಿರೋಧದ ಹೋರಾಟದಲ್ಲಿ ಬಳಸಿಕೊಳ್ಳಬಹುದಾಗಿದೆ. ಇನ್ನೂರಕ್ಕೂ ಹೆಚ್ಚು ಗುರುತಿಸಲಾದ ಅಹಿಂಸಾತ್ಮಕ ತಂತ್ರಗಳಿವೆ. ಬಹಿಷ್ಕಾರಗಳು (ಗ್ರಾಹಕ, ರಾಜಕೀಯ ಮತ್ತು ಸಾಮಾಜಿಕ); ಧರಣಿಗಳು, ಕಾರ್ಯ ವಿಳಂಬ; ಬಾಡಿಗೆ, ತೆರಿಗೆ ಮತ್ತು ಶುಲ್ಕ ಪಾವತಿ ಮಾಡಲು ತಿರಸ್ಕರಿಸುವುದು; ದಾವೆಗಳು; ನಾಗರಿಕ ಅಶಿಸ್ತು; ಮುಷ್ಕರ; ತಡೆ ಮತ್ತು ಪರ್ಯಾಯ ಸಂಸ್ಥೆಗಳನ್ನು ಅಭಿವೃದ್ಧಿಪಡಿಸುವುದು. ಇವು ನಾಗರಿಕ ಪ್ರತಿರೋಧದ ಕೆಲವು ತಂತ್ರಗಳಾಗಿವೆ.

ತಂತ್ರಗಳ ಆಯ್ಕೆ ಮತ್ತು ಅನುಕ್ರಮವು ಸನ್ನಿವೇಶ ವಿಶ್ಲೇಷಣೆಯನ್ನು ಆಧರಿಸಿರುತ್ತದೆ ಹಾಗೂ ಇದರ ಸಾಮರ್ಥ್ಯಗಳು ಮತ್ತು ಉದ್ದೇಶಗಳು ಏನು ಎಂಬುದನ್ನು ಆಧರಿಸಿರುತ್ತದೆ. ಚಳವಳಿಯು ಅತ್ಯಂತ ಸಶಕ್ತವಾಗಿಲ್ಲದಿದ್ದರೆ, ಇದನ್ನು ವಿಚ್ಛಿದ್ರ ಮತ್ತು ಕಡಿಮೆ ಅಪಾಯದ ತಂತ್ರಗಳಾದ ಬಹಿಷ್ಕಾರ ಅಥವಾ ಅನಾಮಿಕ ಪ್ರದರ್ಶನವನ್ನು ಪರಿಗಣಿಸಬಹುದಾಗಿದ್ದು, ಈ ಮೂಲಕ ಚಳವಳಿಯ ಸಾಮರ್ಥ್ಯವನ್ನು ರೂಪಿಸಬಹುದು, ಸಂದೇಶವನ್ನು ನೀಡಬಹುದು ಮತ್ತು/ಅಥವಾ ಪ್ರತಿರೋಧಿಗಳನ್ನು ವಿಚ್ಛಿದ್ರಗೊಳಿಸಬಹುದು. ನಂತರದ ಹಂತದಲ್ಲಿ, ಚಳವಳಿ ಗಟ್ಟಿಯಾದ ನಂತರ, ಇನ್ನಷ್ಟು ಕೇಂದ್ರೀಕೃತ ಕ್ರಮಗಳಾದ ರ್ಯಾಲಿಗಳು, ಪಾದಯಾತ್ರೆ, ಪ್ರತಿಭಟನಾರ್ಥ ಪ್ರದರ್ಶನ ಅಥವಾ ಸಾಮೂಹಿಕ ನಾಗರಿಕ ಅಶಿಸ್ತಿನಂತಹವುಗಳನ್ನು ಮಾಡಬಹುದಾಗಿದೆ.

ನಾಗರಿಕ ಪ್ರತಿರೋಧವನ್ನು ಪ್ರಕಟಿಸಲು ಸಾರ್ವಜನಿಕರು ಹೆಚ್ಚು ಜನಪ್ರಿಯವಾದ ಪ್ರತಿಭಟನೆಯನ್ನೇ ಬಳಸುತ್ತಾರೆ ಎಂದ ಮಾತ್ರಕ್ಕೆ ಅದೊಂದೇ ಉತ್ತಮ ಕ್ರಮ ಎಂದೇನಲ್ಲ ಎಂಬುದನ್ನು ನೆನಪಿಡಬೇಕು. ಸನ್ನಿವೇಶವನ್ನು ಆಧರಿಸಿ, ಚಳವಳಿಯ ಕಡಿಮೆ ವೆಚ್ಚದಲ್ಲಿ ಉತ್ತಮ ಫಲಿತಾಂಶವನ್ನು ನೀಡುವ ಇತರ ತಂತ್ರಗಳೂ ಇವೆ. ಕ್ರಿಯಾಶೀಲತೆ ಮತ್ತು ವ್ಯೂಹಾತ್ಮಕ ಯೋಚನೆಗಳು ಯಾವ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು ಎಂದು ನಿರ್ಧರಿಸುವದಲ್ಲಿ ಮಹತ್ವದ್ದಾಗಿವೆ.

## 5. ಚಳವಳಿಗೆ ಆಕರ್ಷಕ ನಾಯಕರು ಇಲ್ಲದಿದ್ದರೆ?

ಹಲವು ಐತಿಹಾಸಿಕ ಚಳವಳಿಗಳು ಯಾವುದೇ ಆಕರ್ಷಕ ನಾಯಕರು ಇಲ್ಲದೆಯೇ ಫಲ ನೀಡಿವೆ. ದಕ್ಷಿಣ ಆಫ್ರಿಕಾದಲ್ಲಿ ನಡೆದ ವರ್ಣಭೇದ ನೀತಿ ವಿರೋಧಿ ಹೋರಾಟವು ಅದರ ನಾಯಕ ಜೈಲಿನಲ್ಲಿದ್ದಾಗಲೇ ಮತ್ತು ಚಳವಳಿಯಿಂದ ದೂರ ಸರಿದಾಗಲೇ ಹೆಚ್ಚು ಜನಪ್ರಿಯವಾಗಿತ್ತು. ವೈಯಕ್ತಿಕ ಪ್ರಭೆ ಅಥವಾ ನಾಯಕರಲ್ಲಿನ ಮಾತನಾಡುವ ಶಕ್ತಿಗಿಂತ ಹೆಚ್ಚಾಗಿ, ಚಳವಳಿಯಲ್ಲಿನ ವೈವಿಧ್ಯಮಯ ಭಾಗೀದಾರರ ಮಾತುಗಳನ್ನು ಕೇಳಿಸಿಕೊಳ್ಳುವುದು ಮತ್ತು ಪ್ರತಿನಿಧಿಸುವುದು, ಕ್ರಮದ ಪರ್ಯಾಯ ವಿಧಾನದಲ್ಲಿನ ವೆಚ್ಚ ಮತ್ತು ಅಪಾಯಗಳನ್ನು ವಿಶ್ಲೇಷಿಸುವುದು ಮತ್ತು ಸ್ಥಳೀಯ ನಾಯಕರೊಂದಿಗೆ ನಿರ್ಧಾರವನ್ನು ಹಂಚಿಕೊಳ್ಳುವುದು ಹೇಗೆ ಎಂದು ತಿಳಿಯುವುದು ಅತ್ಯಂತ ಪ್ರಮುಖವಾಗಿದೆ.

ಇದರ ಜತೆಗೆ, ಆಕರ್ಷಕ ನಾಯಕರ ಮೇಲೆ ಅತಿಯಾದ ಅವಲಂಬನೆಯೂ ಇತರ ಅಪಾಯಗಳನ್ನು ಹೊಂದಿರುತ್ತದೆ. ಕೆಲವು ಬಾರಿ ಇಂತಹ ನಾಯಕರನ್ನು ಆಡಳಿತಗಾರರು ಅಧಿಕಾರ ಹಂಚಿಕೆಗೆ ಆಹ್ವಾನಿಸಬಹುದು ಅಥವಾ ಅವರನ್ನು ಬಂಧಿಸಬಹುದು. ನಾಯಕರು ಬದಿಗೆ ಸರಿದರೂ ಚಳವಳಿಯು ಹೊಸ ನಾಯಕರೊಂದಿಗೆ ಮುಂದುವರಿಯುವ ರೀತಿಯಲ್ಲಿ ನಿರೋಧಕತೆ, ಪ್ರತಿನಿಧಿತ್ವ ಚಳವಳಿಗಳನ್ನು ಆಯೋಜಿಸಲಾಗುತ್ತದೆ.

## 6. ನಾಗರಿಕ ಪ್ರತಿರೋಧವು ನನ್ನ ದೇಶದಲ್ಲಿ ಕೆಲಸ ಮಾಡದಿದ್ದರೆ ಏನು ಮಾಡಬೇಕು?

ನಾಗರಿಕ ಪ್ರತಿರೋಧವು ಎಲ್ಲ ಬಾರಿಯೂ ಯಶಸ್ವಿಯಾಗುವುದಿಲ್ಲ. ಆದರೆ, ಇದು ಫಲಿತಾಂಶ ನೀಡುವುದಿಲ್ಲ ಎಂದು ಪರಿಣಿತರು ಹಾಗೂ ಇತರರು ಭಾವಿಸಿದ ವಿಶ್ವದ ಹಲವು ದೇಶಗಳಲ್ಲಿ ಇದು ಫಲ ನೀಡಿದೆ. ಚಿಲಿಯ ಜನರಲ್ ಅಗಸ್ಟೋ ಪಿನೋಚೆಟ್ ವಿಶ್ವದ ಅತ್ಯಂತ ಕ್ರೂರ ಸರ್ವಾಧಿಕಾರಿ ಎಂದು ಪರಿಗಣಿಸಲ್ಪಟ್ಟಿದ್ದ ಮತ್ತು ನಾಗರಿಕ ಪ್ರತಿರೋಧದಿಂದ ಆತನನ್ನು ಪಲ್ಲಟಗೊಳಿಸಲಾಗದು ಎಂದು ಭಾವಿಸಲಾಗಿತ್ತು. ಆದರೆ ನಾಗರಿಕ ಪ್ರತಿರೋಧದಿಂದಲೇ ಆತ ಅಧಿಕಾರ ಕಳೆದುಕೊಂಡ. ಬಚರ್ ಆಫ್ ದಿ ಬಾಲ್ಕನ್ಸ್ ಎಂದೇ ಅಡ್ಡ ಹೆಸರನ್ನು ಹೊಂದಿರುವ ಸರ್ಬಿಯಾದ ಸರ್ವಾಧಿಕಾರಿ ಸ್ಲೊಬೊಡನ್ ಮಿಲೊಸೆವಿಕ್‌ನನ್ನು ಅಹಿಂಸೆಯ ಒತ್ತಡದಿಂದ ಕೆಳಗಿಳಿಸಲಾಯಿತು ಎಂದು ಕೆಲವು ಭಾವಿಸಿದ್ದರು. ಆದರೆ 2000ನೇ ಇಸ್ವಿಯಲ್ಲಿ ಆತನ ವಿರುದಧ ಪ್ರತಿಭಟನೆ ನಡೆಸುತ್ತಿದ್ದ ಲಕ್ಷಾಂತರ ಜನರನ್ನು ಹತ್ತಿಕ್ಕಲು ಪೊಲೀಸರು ಮತ್ತು ಸೇನೆಗೆ ಮಿಲೋಸೆವಿಕ್ ಆದೇಶ ನೀಡಿದಾಗ, ಆತನ ಭದ್ರತಾ ಸಿಬ್ಬಂದಿಗಳೇ ಆತನ ಆದೇಶವನ್ನು ಪಾಲಿಸಲು ನಿರಾಕರಿಸಿದರು. ಆಗ ಮಿಲೊಸೆವಿಕ್ ಯಾವುದೇ ಪರ್ಯಾಯ ಅವಕಾಶ ಹೊಂದಿರಲಿಲ್ಲ. ಹೀಗಾಗಿ ಕೆಳಗಿಳಿಯಲೇಬೇಕಾಯಿತು.

ನಿಮ್ಮ ಸನ್ನಿವೇಶದಲ್ಲಿ ನಾಗರಿಕ ಪ್ರತಿರೋಧವು ಕೆಲಸ ಮಾಡುತ್ತದೆ ಎಂಬ ಬಗ್ಗೆ ನಿಮಗೆ ಇನ್ನೂ ಖಚಿತವಿಲ್ಲದಿದ್ದರೆ, ಸಂಭಾವ್ಯ ಪರ್ಯಾಯಗಳೆಂದರೆ: ಪರ್ಯಾಯ ರಾಜಕೀಯ ವ್ಯವಸ್ಥೆಯನ್ನು ರೂಪಿಸುವುದು; ಚುನಾವಣೆಗೆ ಸ್ಪರ್ಧಿಸುವುದು; ಕಾನೂನು ವ್ಯವಸ್ಥೆಗೆ ಮೊರೆ ಹೋಗುವುದು; ಮಾತುಕತೆ ಮತ್ತು ಮಾತುಕತೆಯಲ್ಲಿ ತೊಡಗಿಸಿಕೊಳ್ಳುವುದು; ಬೆಂಬಲಕ್ಕೆ ಅಂತಾರಾಷ್ಟ್ರೀಯ ಪಕ್ಷಗಳಿಗೆ ಮೊರೆ ಹೋಗುವುದು ಮತ್ತು ಸಶಸ್ತ್ರ ಬಂಡುಗಾರಿಕೆಯು ಪರ್ಯಾಯ ಆಯ್ಕೆಗಳಾಗಿದ್ದು, ಇವುಗಳನ್ನು ವಿಶ್ವದ ವಿವಿಧೆಡೆ ಪ್ರಯೋಗಿಸಲಾಗಿದೆ. ನಾಗರಿಕ ಪ್ರತಿರೋಧವು ಯಶಸ್ವಿಯಾಗುತ್ತದೆ ಎಂಬುದು ಖಚಿತವಾಗಿಲ್ಲದಿದ್ದರೆ, ಇತರ ಯಾವುದೇ ಸಂಭಾವ್ಯ ಕ್ರಮಗಳು ಯಶಸ್ವಿಯಾಗುತ್ತವೆ ಎಂಬುದೂ ಖಚಿತವಿಲ್ಲ.

ವಿರೋಧಿ ಅಥವಾ ಪ್ರತಿರೋಧಿಗಳ ಸಮೂಹದ ನಿರ್ಧಾರವೆಂದರೆ ಪ್ರತಿಭಟನೆಯ ರೂಪವನ್ನು ಆಯ್ಕೆ ಮಾಡುವುದಾಗಿದ್ದು, ವೈವಿಧ್ಯಮಯ ಜನರ ಬೆಂಬಲ, ಆಡಳಿತಗಾರರನ್ನು ಪ್ರಶ್ನಿಸುವುದು, ಪ್ರತಿರೋಧವನ್ನು ತಡೆಯುವುದು ಅಥವಾ ನಿರ್ಲಿಪ್ತಗೊಳಿಸುವುದು ಮತ್ತು ಪ್ರಸ್ತುತ ವ್ಯವಸ್ಥೆಯನ್ನು ಬೆಂಬಲಿಸುವವರನ್ನು ವಿಭಜಿಸುವುದು ಅತ್ಯಂತ ಪ್ರಮುಖವಾಗಿದೆ. ಈ ಆಯ್ಕೆಗಳನ್ನು ಪರಿಗಣಿಸಿದ ಹಲವು ಸಮೂಹಗಳು ಇತಿಹಾಸದಲ್ಲಿ ಕಾಣಬರುತ್ತವೆ ಮತ್ತು ಇವರು ನಾಗರಿಕ ಪ್ರತಿರೋಧದಲ್ಲಿ ತೊಡಗಿಸಿಕೊಳ್ಳಲು ಆಯ್ಕೆ ಮಾಡಿಕೊಂಡಿದ್ದಾರೆ. ಆದಾಗ್ಯೂ, ಇದನ್ನು ಕೆಲವು ಬಾರಿ ರಾಜಕೀಯ ಕ್ರಮಗಳಾದ ಚುನಾವಣೆ, ಕಾನೂನಾತ್ಮಕ ಸವಾಲುಗಳು, ಮಾತುಕತೆ ಮತ್ತು ವ್ಯವಸ್ಥೆಯನ್ನು ಮರುರೂಪಿಸುವಂತಹ ಬದಲಾವಣೆಗಳ ಜೊತೆಗೆ ಮಾಡಲಾಗುತ್ತದೆ.

## 7. ನನ್ನ ವಿರೋಧಿಗಳು ಹಿಂಸೆಯನ್ನು ಬಳಸಿದರೆ ಏನು ಮಾಡುವುದು?

ನಿಮ್ಮ ವಿರೋಧಿಗಳು ಒಂದು ಹಂತದಲ್ಲಿ ಹಿಂಸೆಯನ್ನು ಬಳಸಬಹುದು ಎಂದು ನೀವು ನಿರೀಕ್ಷಿಸಬೇಕು. ಐತಿಹಾಸಿಕವಾಗಿ, ಎಂದಿಗೂ ನಡೆದಿದ್ದು ಹೀಗೆಯೇ. ಆದರೆ ಹಿಂಸೆಯನ್ನು ವಿರೋಧಿಗಳ ಬಳಸಿದ ಮಾತ್ರಕ್ಕೆ ನಾಗರಿಕ ಪ್ರತಿರೋಧವು ಸೋತಿದೆ ಎಂದು ಹೇಳಲಾಗದು. ನಾಗರಿಕ ಪ್ರತಿರೋಧವು ಹಿಂಸೆಯನ್ನು ವಿವಿಧ ರೀತಿಯಲ್ಲಿ ಎದುರಿಸಿದ್ದು, ಇದು ತನ್ನ ಪರಿಣಾಮಕಾರಿತ್ವವನ್ನು ಕಡಿಮೆ ಮಾಡಿಕೊಂಡಿದೆ ಮತ್ತು/ಅಥವಾ ಹತ್ತಿಕ್ಕುವವರ ವಿರುದ್ಧ ಇನ್ನೊಂದು ರೀತಿಯಲ್ಲಿ ಪರಿಣಾಮ ಬೀರಿದೆ.

ಮೊದಲು, ಹಿಂಸಾತ್ಮಕ ಪ್ರತಿರೋಧವನ್ನು ತಡೆಯಲು ಅಥವಾ ನಿರ್ವಹಿಸಲು, ನಾಗರಿಕ ಪ್ರತಿರೋಧ ಕ್ರಮಗಳು ಹಿಂಸೆಯನ್ನು ಸಾಗಿ ಮುಂದುವರಿಯುವುದು ಕಷ್ಟವಾಗುವಂತೆ ಮಾಡಬಹುದು. ಉದಾಹರಣೆಗೆ, ಗ್ರಾಹಕ ಬಹಿಷ್ಕಾರದಲ್ಲಿ ಕೆಲವು ನಿಗದಿತ ಉತ್ಪನ್ನಗಳನ್ನು ಖರೀದಿ ಮಾಡಲು ಖರೀದಿದಾರರು ಬಳಸದಿದ್ದಾಗ, ಅದನ್ನು ಹತ್ತಿಕ್ಕುವುದು ಅತ್ಯಂತ ಕಷ್ಟ. ಯಾಕೆಂದರೆ ಅವು ವಿಕೇಂದ್ರಿತವಾಗಿವೆ ಮತ್ತು ಯಾರು ಬಹಿಷ್ಕಾರದಲ್ಲಿ ಭಾಗವಹಿಸಿದ್ದಾರೆ ಮತ್ತು ಯಾರು ಭಾಗವಹಿಸಿಲ್ಲ ಎಂಬುದನ್ನು ವಿಶ್ಲೇಷಿಸಲು ಕಷ್ಟವಾಗುತ್ತದೆ. ಪ್ರತಿಭಟನೆ ಅಥವಾ ಇತರ ಸಾರ್ವಜನಿಕ ಪ್ರತಿಭಟನೆಗಳು ಮತ್ತು ಕೇಂದ್ರಿತ ತಂತ್ರಗಳನ್ನು ಹತ್ತಿಕ್ಕಿದರೆ, ಶುಲ್ಕ ಅಥವಾ ತೆರಿಗೆಯನ್ನು ಪಾವತಿಸಲು ನಿರಾಕರಿಸುವಂತೆ ವಿಕೇಂದ್ರೀಕೃತ ಮತ್ತು ದೈಹಿಕೇತರ ಅಥವಾ ರಾಜಕೀಯೇತರ ಪ್ರತಿರೋಧ ಅಥವಾ ಸಾಮಾನ್ಯ ಮುಷ್ಕರವೂ ಚಳವಳಿಗೆ ಉತ್ತಮ ವಿಧಾನವಾಗಿರುತ್ತದೆ.

ಎರಡನೆಯದಾಗಿ, ನಾಗರಿಕ ಪ್ರತಿರೋಧ ಚಳವಳಿಯು ನವೀನ ತಂತ್ರಗಳನ್ನು ಬಳಸಿ, ವಿರೋಧಿಗಳ ಹತ್ತಿಕ್ಕುವಿಕೆಗೆ ತಿರುಗೇಟು ನೀಡಬಹುದಾಗಿದೆ. ವಿಶ್ವಕ್ಕೆ ಹತ್ತಿಕ್ಕುವಿಕೆಯನ್ನು ಬಹಿರಂಗಗೊಳಿಸುವುದು ಮತ್ತು ದೇಶದೊಳಗೆ ಹತ್ತಿಕ್ಕುವಿಕೆಯ ಚಿತ್ರಗಳು ಮತ್ತು ಕಥೆಗಳನ್ನು ಪ್ರಕಟಿಸುವ ಮೂಲಕ ಹತ್ತಿಕ್ಕುವಿಕೆಯನ್ನು ಸಮಸ್ಯಾತ್ಮಕವಾಗಿಸಬಹುದು. ಎಲ್ಲ ಹತ್ತಿಕ್ಕುವಿಕೆಯೂ ತಿರುಗೇಟು ನೀಡುವುದಿಲ್ಲ. ಆದರೆ ಚಳವಳಿ ಸಂಕೀರ್ಣ, ವಿಳಂಬ ಅಥವಾ ವಿಶಿಷ್ಟ ಸನ್ನಿವೇಶಕ್ಕೆ ತಿರುಗಿಕೊಂಡಾಗ ಸಾರ್ವಜನಿಕ ಮತ್ತು ಅಂತಾರಾಷ್ಟ್ರೀಯ ಬೆಂಬಲವನ್ನು ಕಳೆದುಕೊಳ್ಳಬಹುದಾಗಿದೆ.

ಮೂರನೆಯದಾಗಿ, ನಾಗರಿಕ ಪ್ರತಿರೋಧ ಹಲವು ಪ್ರಕರಣಗಳಾದ 1986ರಲ್ಲಿ ಫಿಲಿಪೀನ್ಸ್, 1988ರಲ್ಲಿ ಚಿಲಿ, 2000ನೇ ಇಸ್ವಿಯಲ್ಲಿ ಸರ್ಬಿಯಾ ಮತ್ತು 2004 ರಲ್ಲಿ ಉಕ್ರೇನ್ ಪ್ರತಿಭಟನೆಗಳಲ್ಲಿ ಪ್ರತಿಭಟನೆಕಾರರನ್ನು ಭದ್ರತಾ ಪಡೆಗಳು ಹತ್ತಿಕ್ಕಿವೆ. ಇದು ತಿರುಗೇಟು ನೀಡುವ ಪ್ರತಿಭಟನಾಕಾರರ ಸಾಮರ್ಥ್ಯವನ್ನೇ ಕಡಿಮೆ ಮಾಡಿವೆ. ಭದ್ರತಾ ಪಡೆಗಳ ಬಲವನ್ನು ಉದ್ದೇಶಪೂರ್ವಕ ಹಾಗೂ ದೀರ್ಘಕಾಲೀನ ಪರಿಣಾಮಗಳಿಂದ ಮಾಡಿದ್ದು, ಭದ್ರತಾ ಸಿಬ್ಬಂದಿಗಳು ತಮ್ಮ ವಿಶ್ವಾಸಾರ್ಹತೆಯನ್ನು ಬದಲಿಸಿವೆ.

## 8. ನನ್ನ ವಿರೋಧಿಗಳನ್ನು ಮನವೊಲಿಸಲು ಸಾಧ್ಯವಾಗದಿದ್ದರೆ ಏನು ಮಾಡಬೇಕು?

ಪ್ರತಿರೋಧವನ್ನು ಜಯಿಸಲು ಮನವೊಲಿಸುವುದು ಮಾತ್ರವೇ ಅಗತ್ಯವೇನಲ್ಲ. ಆದಾಗ್ಯೂ, ನಿಮ್ಮ ವಿರೋಧಿಗಳ ಕೆಲವು ಬೆಂಬಲಿಗರ ಮನವೊಲಿಸುವುದು ಅಗತ್ಯವಾಗಿದೆ.

ನೆನಪಿಡಿ, ನಾಗರಿಕ ಪ್ರತಿರೋಧವು ಪ್ರಬಲವಾದದ್ದು. ಯಾಕೆಂದರೆ ಹತ್ತಿಕ್ಕುವಿಕೆಯನ್ನು ನೇರವಾಗಿ ಅಥವಾ ಪರೀಕ್ಷವಾಗಿ ಬೆಂಬಲಿಸುವ ಸಾವಿರಾರು ಕೋಟ್ಯಂತರ ಜನರ ನಂಬಿಕೆ ಮತ್ತು ವರ್ತನೆಯನ್ನು ಬದಲಿಸಬಹುದಾಗಿದೆ. ನಿಮ್ಮ ಪ್ರತಿರೋಧಿಗಳ ಬಲದ ಮೂಲವು ಕ್ಷೀಣಿಸಿದರೆ, ಆತ ಒಪ್ಪಿದನೋ ಇಲ್ಲವೋ ಎಂಬುದು ಪ್ರಮುಖವಾಗುವುದಿಲ್ಲ. ಫಲಿತಾಂಶವನ್ನು ನಿಯಂತ್ರಿಸಲಾಗದು ಎಂದು ಆತ ಮನಗಾಣುವವರೆಗೆ ಆತನ ಅಧಿಕಾರವನ್ನು ಕಡಿಮೆ ಮಾಡಲಾಗುತ್ತದೆ ಮತ್ತು ಹೊಸ ವ್ಯವಸ್ಥೆಗೆ ಆತ ಬದಲಾಗಲೇಬೇಕಾಗುತ್ತದೆ.

ಉದಾಹರಣೆಗೆ, 1985ರಲ್ಲಿ ದಕ್ಷಿಣ ಆಫ್ರಿಕಾದ ಪೋರ್ಟ್ ಎಲಿಜಬೆತ್ ನಗರದಲ್ಲಿ ಬಿಳಿಯರು ನಡೆಸುತ್ತಿರುವ ವಹಿವಾಟುಗಳಿಗೆ ಬಹಿಷ್ಕಾರ ಹಾಕಿದ್ದು, ನೀತಿಯನ್ನು ಬದಲಿಸುವಂತೆ ಸರ್ಕಾರದ ಮೇಲೆ ಅವರು ಒತ್ತಡ ಹಾಕುವಂತೆ ಮಾಡಿತು. ಚಳವಳಿಯ ಉದ್ದೇಶಕ್ಕೆ ಈ ವಹಿವಾಟುಗಳು ಯಾವುದೇ ಸಂಬಂಧ ಹೊಂದಿಲ್ಲದಿರಬಹುದು. ಆದರೆ ಸರ್ಕಾರದ ಹತ್ತಿಕ್ಕುವಿಕೆಯನ್ನು ಬೆಂಬಲಿಸುವುದಕ್ಕಿಂತ ಚಳವಳಿಯ ಕೆಲವು ಬೇಡಿಕೆಗಳನ್ನು ಸಮ್ಮತಿಸುವುದು ಹೆಚ್ಚು ಸೂಕ್ತ ಎಂದು ಅವರಿಗೆ ಅರಿವು ಮಾಡಿತು.

## 9. ಇದಕ್ಕೆ ತುಂಬಾ ಸಮಯ ಬೇಕಾಗುತ್ತದೆ. ನಾವು ಕಾಯುವಂತಿಲ್ಲದಿದ್ದರೆ ಏನು ಮಾಡುವುದು?

ನಾಗರಿಕ ಪ್ರತಿರೋಧವು ಸಾಮಾನ್ಯವಾಗಿ ಹೆಚ್ಚು ಸಮಯವನ್ನು ತೆಗೆದುಕೊಳ್ಳುವುದಿಲ್ಲ. ವರ್ಣಭೇದ ನೀತಿ ವಿರುದ್ಧದ ಹೋರಾಟವು ಹತ್ತು ವರ್ಷಗಳವರೆಗೆ ನಡೆದಿದ್ದರೂ, ತಮ್ಮ ಸರ್ವಾಧಿಕಾರಿ ಫರ್ಡಿನಂಡ್ ಮಾರ್ಕೋಸ್‌ನನ್ನು ಕೆಳಗಿಳಿಸಲು ಕೆಲವೇ ವರ್ಷಗಳ ಹೋರಾಟವನ್ನು ಫಿಲಿಪೀನ್ಸ್ ಮಾಡಿತ್ತು. ನಾಗರಿಕ ಪ್ರತಿರೋಧದ ಯಶಸ್ಸು ಇರುವುದು ಸಮಯದಲ್ಲಲ್ಲ. ಬದಲಿಗೆ ಚಳವಳಿಯು ಸಂಘಟಿತವಾಗಿದೆಯೇ ಮತ್ತು ತನ್ನ ಕ್ರಮ ವ್ಯೂಹಾತ್ಮಕವಾಗಿದೆಯೇ ಎಂಬುದನ್ನು ಆಧರಿಸಿ ಆಗಿರುತ್ತದೆ.

## 10. ನಾವು ಜಯಿಸುವುದು ಹೇಗೆ?

ಜನಪ್ರಿಯ ಒಗ್ಗಟ್ಟು, ಎಚ್ಚರಿಕೆಯ ಯೋಜನೆ ಮತ್ತು ಅಹಿಂಸೆಯ ಶಿಸ್ತನ್ನು ನಿಮ್ಮ ಚಳವಳಿ ಅಥವಾ ಕ್ಯಾಂಪೇನ್ ಹೊಂದಿದ್ದರೆ ಯಶಸ್ಸು ಸಾಧಿಸುವ ಹೆಚ್ಚು ಅವಕಾಶವನ್ನು ಹೊಂದಿರುತ್ತೀರಿ.

ಒಗ್ಗಟ್ಟು ಅತ್ಯಂತ ಮಹತ್ವದ್ದಾಗಿದೆ. ಯಾಕೆಂದರೆ ಬಹುಜನರ ಬದ್ಧತೆ ಮತ್ತು ಒಪ್ಪಿಗೆಯನ್ನು ಅದು ಪ್ರತಿನಿಧಿಸಿದರೆ ಚಳವಳಿಯು ಹೆಚ್ಚು ಶಕ್ತಿಯುತವಾಗಿರುತ್ತದೆ. ಕ್ರಾಂತಿಯಲ್ಲಿ ಭಾಗವಹಿಸುವುದು ಸ್ವಯಂಪ್ರೇರಿತ ಎಂಬುದನ್ನು ನೆನಪಿಡಬೇಕು. ಜನರು ಸೇರಿ ರಿಸ್ಕ್ ತೆಗೆದುಕೊಳ್ಳುತ್ತಾರೆ. ಯಾಕೆಂದರೆ ಅವರು ಚಳವಳಿಯಲ್ಲಿ ನಂಬಿಕೆ ಹೊಂದಿರುತ್ತಾರೆ. ಆದಾಗ್ಯೂ, ಸ್ಪಷ್ಟವಾಗಿಲ್ಲದಿದ್ದರೆ ಅಥವಾ ಅನುಮಾನವಿದ್ದರೆ ಒಗ್ಗಟ್ಟು ಕಡಿಮೆಯಾಗುತ್ತದೆ ಮತ್ತು ಹಲವರು ಭಾಗವಹಿಸದೇ ಇರಬಹುದು. ಸಾಮಾನ್ಯವಾಗಿ, ಯಶಸ್ವಿ ನಾಗರಿಕ ಪ್ರತಿರೋಧ ಚಳವಳಿಯು ಪುರುಷರು, ಮಹಿಳೆಯರು, ಮಕ್ಕಳು, ಮಧ್ಯವಯಸ್ಕ ಜನರು ಮತ್ತು ವೃದ್ಧರನ್ನು ಒಗ್ಗಟ್ಟಾಗಿಸಿದೆ. ವೈವಿಧ್ಯಮಯ ಧಾರ್ಮಿಕ ಮತ್ತು ಸಾಂಪ್ರದಾಯಿಕ ಹಿನ್ನೆಲೆಯಿರುವವರು, ವಿದ್ಯಾರ್ಥಿಗಳು, ಕೂಲಿಗಳು, ಪ್ರತಿಭಾವಂತರು, ವಹಿವಾಟು ಸಮುದಾಯ ಸದಸ್ಯರು ಮತ್ತು ಇತರರರನ್ನು ಒಳಗೊಂಡಿದೆ.

ಯೋಜನೆ ಅತ್ಯಂತ ಪ್ರಮುಖವಾಗಿದೆ. ಯಾಕೆಂದರೆ ನಾಗರಿಕ ಪ್ರತಿರೋಧವು ಕ್ಯಾಂಪೇನ್, ಚಳವಳಿ ಅಥವಾ ನಾಗರಿಕ ಸಮೂಹದಂತಹ ಮುಖ್ಯಸ್ಥರು ಮತ್ತು ಅದರ ವಿರೋಧಿಗಳ ಮಧ್ಯದ ಸ್ಪರ್ಧೆಯಾಗಿದೆ. ಇಂತಹ ಸ್ಪರ್ಧೆಯಲ್ಲಿ, ಸಂಘಟನೆ ಮತ್ತು ಕಾರ್ಯತಂತ್ರವು ಪರಿಪಕ್ವವಾಗಿರಬೇಕು ಮತ್ತು ಬಲವನ್ನು ಚಳವಳಿಯ ಕಡೆಗೆ ನಿರ್ದೇಶಿಸಬೇಕಿರುತ್ತದೆ. ನಾಗರಿಕ ಪ್ರತಿರೋಧದಲ್ಲಿ, ನಾಯಕರು ಹಲವು ಕಾರ್ಯತಂತ್ರ ಮತ್ತು ವ್ಯೂಹಾತ್ಮಕ ನಿರ್ಧಾರಗಳನ್ನು ಮಾಡುತ್ತಾರೆ. ಇವುಗಳೆಂದರೆ ತಮ್ಮ ಸಂಪನ್ಮೂಲಗಳನ್ನು ಹೇಗೆ ನಿರ್ಮಿಸುವುದು, ಆ ಸಂಪನ್ಮೂಲಗಳನ್ನು ಹೇಗೆ ಉತ್ತಮವಾಗಿ ಬಳಸುವುದು, ತಮ್ಮ ವಿರೋಧಿಗಳ ಸಮಸ್ಯೆಯನ್ನು ಹೇಗೆ ಹೆಚಚಿಸುವುದು ಮತ್ತು ಯಾವುದೇ ಪ್ರತಿರೋಧಗಳನ್ನು ಎದುರಿಸುವುದು ಹೇಗೆ ಎಂಬುದನ್ನು ವಿಶ್ಲೇಷಣೆ ಮಾಡುವುದಾಗಿದೆ. ಉತ್ತಮ ನಿರ್ಧಾರಗಳನ್ನು ಹಠಾತ್ತನೆ ಮಾಡಿದ್ದು ಅತ್ಯಂತ ಅಪರೂಪ. ಉತ್ತಮ ಯೋಜನೆ ಮಾಡಲು, ಎರಡು ರೀತಿಯ ಜ್ಞಾನ ಅಗತ್ಯವಿರುತ್ತದೆ. ಮೊದಲು, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸನ್ನಿವೇಶಗಳ ವಿವರವಾದ ತಿಳಿವಳಿಕೆಯನ್ನು ಕಾರ್ಯತಂತ್ರ ರೂಪಿಸುವವರು ಹೊಂದಿರಬೇಕು ಮತ್ತು ಸಮಾಜದಲ್ಲಿನ ವಿವಿಧ ಸಮೂಹಗಳ ಆಸಕ್ತಿ ಮತ್ತು ನಿರೀಕ್ಷೆಗಳನ್ನು ಅರ್ಥ ಮಾಡಿಕೊಳ್ಳಬೇಕಿರುತ್ತದೆ. ಎರಡನೆಯದಾಗಿ, ಹೇಗೆ ನಾಗರಿಕ ಪ್ರತಿರೋಧವು ಕೆಲಸ ಮಾಡುತ್ತದೆ ಎಂಬುದನ್ನು ಕಾರ್ಯತಂತ್ರ ರೂಪಿಸುವವರು ತಿಳಿದುಕೊಳ್ಳಬೇಕಿದೆ. ಇದನ್ನು ವೈಯಕ್ತಿಕ ಅನುಭವ, ಪುಸ್ತಕಗಳು, ಸಿನಿಮಾಗಳು ಮತ್ತ ಇಂಟರ್ನೆಟ್‌ನಂತಹ ಸಂಪನ್ಮೂಲಗಳು ಮತ್ತು ನಾಗರಿಕ ಪ್ರತಿರೋಧ ಹಾಗೂ ರಾಜಕೀಯ ಸಂಘಟನೆಯಲ್ಲಿ ಅನುಭವ ಹೊಂದಿರುವ ಇತರರೊಂದಿಗೆ ಸಂವಹನ ನಡೆಸುವ ಮೂಲಕ ತಿಳಿಯಬಹುದಾಗಿದೆ.

ಅಹಿಂಸಾತ್ಮಕ ಶಿಸ್ತು ಅತ್ಯಂತ ಸಂಕೀರ್ಣವಾಗಿದೆ, ಯಾಕೆಂದರೆ ಚಳವಳಿಯ ಹಿಂಸೆಯು ಪರಿಣಾಮವನ್ನು ಕಡಿಮೆ ಮಾಡುತ್ತದೆ ಮತ್ತು ಹತ್ತಿಕ್ಕುವುದನ್ನು ಸಮರ್ಥಿಸಿಕೊಳ್ಳಲು ಪ್ರೋತ್ಸಾಹ ಮತ್ತು ಅವಕಾಶವನ್ನು ನೀಡುತ್ತದೆ. ಮುಂದುವರಿದು, ಪ್ರತಿರೋಧ ಚಳವಳಿಯು

ಹಿಂಸೆಯಲ್ಲಿ ತೊಡಗಿಸಿಕೊಂಡರೆ, ಹಿಂಸೆಯನ್ನು ಅಪಾಯವನ್ನು ತಡೆಯದ ಸಮಾಜದ ಬಹುತೇಕ ಜನರು ಪ್ರತಿರೋಧದಲ್ಲಿ ಭಾಗವಹಿಸದೇ ಇರಬಹುದು. ಅಂತಿಮವಾಗಿ, ಪೊಲೀಸ್ ಮತ್ತು ಸೇನೆಯ ವಿರುದ್ಧ ಹಿಂಸೆಯನ್ನು ಚಳವಳಿಯು ಉಂಟು ಮಾಡಿದರೆ, ವ್ಯವಸ್ಥೆಯನ್ನು ಪ್ರತಿಪಾದಿಸುವವರನ್ನು ಮನವೊಲಿಸಲು ಸಾಧ್ಯವಾಗುವುದಿಲ್ಲ ಮತ್ತು ಪ್ರತಿಭಟನೆಯನ್ನು ಬೆಂಬಲಿಸುವವರಲ್ಲಿ ಇರುವ ಅನುಕಂಪವೂ ನಾಶವಾಗುತ್ತದೆ. ಇದು ನಾಗರಿಕ ಪ್ರತಿರೋಧದ ಉದ್ದೇಶಕ್ಕೆ ಸಂಪೂರ್ಣ ವಿರುದ್ಧವಾಗಿರುತ್ತದೆ. ಚಳವಳಿಕಯ ಕಾರಣ, ಚಳವಳಿಯ ಕ್ರಮ ಮತ್ತು ಎಲ್ಲ ಹಿನ್ನೆಲೆಯ ಜನಸಾಮಾನ್ಯರನ್ನು ಆಹ್ವಾನಿಸುವ ಧೈರ್ಯವು ಕುಗ್ಗುತ್ತದೆ ಮತ್ತು ವ್ಯವಸ್ಥೆಯನ್ನು ಕೊನೆಗಾಣಿಸಲು ಬಯಸುವವರಿಗಿಂತ ಅಧಿಕಾರದ ಚುಕ್ಕಾಣಿ ಹಿಡಿದಿರುವವರ ಪರವಾಗಿರುವವರನ್ನೇ ಆಕರ್ಷಿಸುತ್ತದೆ.

**<u>ಹೇಳಿಕೆಗಳು</u>**

"ದಕ್ಷಿಣ ಆಫ್ರಿಕಾದಲ್ಲಿ ಬದಲಾವಣೆಯನ್ನು ತಂದಿದ್ದು ಸಾಮೂಹಿಕ ಸಂಘಟನೆ... ಇವರು ದೇಶದ ಮೇಲೆ ಒತ್ತಡ ತಂದರು... ಅಂತಿಮವಾಗಿ ಬದಲಾವಣೆಗೆ ಕಾರಣವಾದರು." ಡಾ. ಜಾನೆಟ್ ಚೆರ್ರಿ

"ಹೋರಾಟದ ಪ್ರಮುಖ ಅಂಶವೇ ಗಮನ ಸೆಳೆಯುವುದು. ಒಂದು ಮೂಲೆಯಲ್ಲಿ ಹೋರಾಟ ಮಾಡುತ್ತಾ ನಿಮ್ಮನ್ನು ಯಾರೂ ಗಮನಿಸದೇ ಇದ್ದರೆ, ಅದು ನಿರುಪಯುಕ್ತ ಪ್ರಯತ್ನ. ನಿಮ್ಮ ಉದ್ದೇಶವನ್ನು ಸಾಧಿಸಲು ಸಾಧ್ಯವಾದಷ್ಟೂ ಹೆಚ್ಚು ಗಮನವನ್ನು ಸೆಳೆಯಬೇಕು." - ಎಂಖುಸೆಲಿ ಜಾಕ್

"ಅಹಿಂಸಾತ್ಮಕ ಪ್ರಯತ್ನದ ಸಮಸ್ಯೆಯೇನೆಂದರೆ, ಸಂಕೀರ್ಣ ಶಿಸ್ತು ಮತ್ತು ತರಬೇತಿಯ ಹಾಗೂ ಕಾರ್ಯತಂತ್ರ ರೂಪಿಸುವುದು ಮತ್ತು ಯೋಜನೆ ರೂಪಿಸುವುದು ಮತ್ತು ನೇಮಕಾತಿ ಮಾಡುವುದು ಮತ್ತು ಚಳವಳಿಯನ್ನು ಮಾಡಲು ಅಗತ್ಯವಿರುವ ಸಂಗತಿಗಳನ್ನು ಕೈಗೊಳ್ಳುವ ಅಗತ್ಯವನ್ನು ಇವರು ಗುರುತಿಸಿರುವುದಿಲ್ಲ. ಇದು ಅನಾಯಾಸವಾಗಿ ಆಗುವಂಥದ್ದಲ್ಲ. ಇದನ್ನು ವ್ಯವಸ್ಥಿತವಾಗಿ ಮಾಡಬೇಕು." - ರೆವ್. ಜೇಮ್ಸ್ ಲಾಸನ್

"ಇದೇ ಕಾರಣಕ್ಕೆ ಈ ಪ್ರತಿರೋಧವು ವ್ಯುತ್ಪನ್ನ ಉತ್ಪಾದಕತೆ ಹೊಂದಿದೆ. ಯಾಕೆಂದರೆ ಇದು ಮೂರನೇ ನ್ಯೂಟನ್ ನಿಯಮ ಕ್ರಿಯೆ ಮತ್ತು ಪ್ರತಿಕ್ರಿಯೆಯಂತೆಯೇ ಇದೆ. ನೀವು ಪ್ರತಿರೋಧದ ಮಟ್ಟವನ್ನು ಹೆಚ್ಚಿಸಿದರೆ, ನಿರೋಧಕತೆಯೂ ಹೊರಟುಹೋಗುತ್ತದೆ." - ಇವಾನ್ ಮರೋವಿಕ್